# ಬೆಲೆಯೇರಿಕೆ ಎದುರು ಜೀವವೇ ಅಗ್ಗ

10

ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದ ವರ್ಷ ಕೂಡ ಇದಾಗಿದೆ. ಪೆಟ್ರೋಲ್ ಬೆಲೆಯು ಮೊದಲ ಸಲ ಲೀಟರ್‌ಗೆ ₹ 100ರ ಗಡಿ ದಾಟಿ, ದಾಖಲೆಯನ್ನೂ ಬರೆದಿದೆ. ಈ ವಿದ್ಯಮಾನ ಹಣದುಬ್ಬರಕ್ಕೂ ಕಾರಣವಾಗಿದ್ದು, ದಿನಬಳಕೆ ವಸ್ತುಗಳ ಬೆಲೆ ಗಗನಮುಖಿಯಾಗಿದೆ. ಕೋವಿಡ್ ಪಿಡುಗಿನ ಮುನ್ನವೇ ಆವರಿಸಿದ್ದ ಆರ್ಥಿಕ ಹಿನ್ನಡೆ, ಕೋವಿಡ್ ಹರಡುವಿಕೆ ತಡೆಯಲು ಸರ್ಕಾರ ಘೋಷಿಸಿದ ಲಾಕ್‌ಡೌನ್ ಮತ್ತು ಅದರಿಂದ ಆಗಿರುವ ಜೀವನೋಪಾಯ ನಷ್ಟದಿಂದ ಜನಸಾಮಾನ್ಯರ ಬದುಕು ಹಳಿ ತಪ್ಪಿರುವಾಗ ಅವರ ಮೇಲೆ ಬೆಲೆ ಏರಿಕೆಯ ಬರೆ ಎಳೆಯಲಾಗಿದೆ. ಬದುಕನ್ನು ಮತ್ತಷ್ಟು ದುರ್ಬರಗೊಳಿಸಲಾಗಿದೆ. ಜನಸಾಮಾನ್ಯರ ಕೊಳ್ಳುವ ಸಾಮರ್ಥ್ಯ ಇಷ್ಟೊಂದು ಕೆಳಮಟ್ಟಕ್ಕೆ ಇಳಿಯುವಂತಹ ವಿದ್ಯಮಾನ ಈ ಹಿಂದೆ ನಡೆದಿರಲಿಲ್ಲ.

ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆ ಮಾಡಿದ್ದು ಸಾಕಾಗಲಿಲ್ಲ ಎಂದು ತೈಲ ನಿಗಮಗಳು ಅಡುಗೆ ಅನಿಲದ ದರವನ್ನೂ ವಿಪರೀತವಾಗಿ ಏರಿಸಿ 'ಮಜಾ' ನೋಡಿವೆ. ಗೃಹ ಬಳಕೆಯ 14.2 ಕೆ.ಜಿ. ತೂಕದ ಅಡುಗೆ ಅನಿಲ ಸಿಲಿಂಡರ್ (ಎಲ್‌ಪಿಜಿ) ದರವು ಫೆಬ್ರುವರಿ ಆರಂಭದಿಂದ ವರ್ಷಾಂತ್ಯದವರೆಗೆ ₹125ರಷ್ಟು ಏರಿಕೆಯಾಗಿದೆ.



ತೈಲ ಬೆಲೆ ಏರಿಕೆ ಎಲ್ಲ ಅಗತ್ಯ ವಸ್ತುಗಳ ಏರಿಕೆಗೂ ಕಾರಣವಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ತಗ್ಗಿದಾಗ ಕೇಂದ್ರ ಸರ್ಕಾರವು ದೇಶಿ ಮಾರುಕಟ್ಟೆಯಲ್ಲಿ ತೈಲದ ಮೇಲಿನ ಎಕ್ಸೈಸ್ ಸುಂಕವನ್ನು ಜಾಸ್ತಿ ಮಾಡಿ, ಕಚ್ಚಾ ತೈಲದ ಬೆಲೆ ಇಳಿಕೆಯ ಪ್ರಯೋಜನ ಗ್ರಾಹಕರಿಗೆ ಸಿಗದಂತೆ ಮಾಡಿದೆ. ರಾಜ್ಯ ಸರ್ಕಾರ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಪ್ರಮಾಣವನ್ನು ಹೆಚ್ಚಿಸಿ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆ ಇಳಿಕೆಯ ಪ್ರಯೋಜನ ಜನರಿಗೆ ಸಿಗದಂತೆ ನೋಡಿಕೊಂಡಿದೆ. ತೀವ್ರ ಬೆಲೆ ಏರಿಕೆ ವಿರುದ್ಧ ಮಡುಗಟ್ಟಿದ್ದ ಜನಾಕ್ರೋಶ ಹೆಚ್ಚಾಗುತ್ತಿದ್ದಂತೆಯೇ, ಚುನಾವಣೆಗಳು ಬೇರೆ ಸಮೀಪಿಸುತ್ತಿದ್ದಂತೆಯೇ ವರ್ಷಾಂತ್ಯದ ಹೊತ್ತಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತೈಲ ಬೆಲೆಯಲ್ಲಿ ಅಲ್ಪ ಇಳಿಕೆಯನ್ನು ಮಾಡಿ ಕೈತೊಳೆದುಕೊಂಡಿವೆ.

ಎಣ್ಣೆಕಾಳು, ಖಾದ್ಯತೈಲ, ಧಾನ್ಯ, ತರಕಾರಿ, ಹಣ್ಣು, ಮೀನು–ಮಾಂಸ ಮತ್ತು ಮೊಟ್ಟೆಯಂತಹ ತೀರಾ ಅಗತ್ಯವಾದ ದಿನಬಳಕೆ ವಸ್ತುಗಳ ಬೆಲೆಯಲ್ಲೂ ಈ ದಿನಗಳಲ್ಲಿ ಹೆಚ್ಚಳ ಆಗಿದೆ. ಬೆಂಡೆ, ಹೀರೆ, ಬದನೆಯಂತಹ ತರಕಾರಿಗಳ ಬೆಲೆಯೂ ಶತಕದ ಗಡಿ ದಾಟಿದ ದಿನಗಳನ್ನು ನಾವು ಇದೇ ಮೊದಲ ಬಾರಿಗೆ ಕಾಣುವಂತಾಗಿದೆ. ಕ್ಯಾರೆಟ್, ಟೊಮೆಟೊ, ಈರುಳ್ಳಿ, ದಪ್ಪ ಮೆಣಸಿನಕಾಯಿ ಜನಸಾಮಾನ್ಯರ ಕೈಗೆಟುಕದಷ್ಟು ದುಬಾರಿಯಾಗಿವೆ. ತೈಲ ಬೆಲೆ ಏರಿಕೆ ಮಾತ್ರವಲ್ಲದೆ ಅಕಾಲಿಕ ಮಳೆಯಿಂದ ಆಗಿರುವ ಬೆಳೆ ನಷ್ಟ ಕೂಡ ತರಕಾರಿ ದರ ಗಗನಮುಖಿ ಆಗುವಂತೆ ಮಾಡಿದೆ. ಜನ ಖರೀದಿಗೆ ಹೋದಲ್ಲೆಲ್ಲ ಕೈಸುಟ್ಟುಕೊಳ್ಳುವಂತಹ ಸ್ಥಿತಿ ಎದುರಾಗಿದೆ. ದಿನಸಿ ಬೆಲೆ ಏರಿಕೆ ಆಗುತ್ತಿದ್ದಂತೆಯೇ ಹೋಟೆಲ್‌ಗಳಲ್ಲಿ ತಿಂಡಿಗಳ ದರ ಕೂಡ ಜಿಗಿತ ಕಂಡಿದೆ. ಬೆಲೆ ಏರಿಕೆಯ ಕುಲುಮೆಯಲ್ಲಿ ಜನರ ಬದುಕು ಕುದಿಯುತ್ತಿರುವ ವಿದ್ಯಮಾನಕ್ಕೆ ಇಡೀ ವರ್ಷ ಸಾಕ್ಷಿಯಾಗಿದ್ದಂತೂ ಸುಳ್ಳಲ್ಲ.



ಬಳಕೆ ಮಾಡುವುದನ್ನು ನಿರ್ಬಂಧಿಸುತ್ತದೆ. ಆದರೆ, ಚಿನ್ನದ ಮೇಲೆ ಹೂಡಿಕೆ ಮಾಡುವ ಮಾದರಿಯಲ್ಲಿ ಕ್ರಿಪ್ಟೊ ಕರೆನ್ಸಿಗಳ ಮೇಲೆ ಹೂಡಿಕೆ ಮಾಡಲು ಅಡ್ಡಿಯಿಲ್ಲ ಎಂದು ಮಸೂದೆ ಹೇಳುತ್ತದೆ ಎಂಬ ವರದಿಗಳು ಇವೆ. ಹೂಡಿಕೆ ಮಾಡಬಹುದಾದರೆ, ಅದು ಸುರಕ್ಷಿತ ಹೂಡಿಕೆಯೇ ಎನ್ನುವ ಪ್ರಶ್ನೆ ಮೂಡುತ್ತದೆ.

ಎಲ್ಲರೂ ಹೂಡಿಕೆ ಮಾಡುತ್ತಿದ್ದಾರೆ ಎಂಬ ಕಾರಣಕ್ಕೆ ಬಿಟ್‌ಕಾಯಿನ್‌ನಂತಹ ಕ್ರಿಪ್ಟೊಕರೆನ್ಸಿಗಳಲ್ಲಿ ಹೂಡಿಕೆ ಬೇಡ. ಅದು ಗುಳ್ಳೆಯಂತೆ. ಯಾವಾಗ ಒಡೆಯಬಹುದು ಎಂಬುದನ್ನು ಹೇಳಲಾಗದು ಎಂಬ ಮಾತನ್ನು ಬ್ಯಾಂಕರ್‌ಗಳು ಹೇಳಿದ್ದಾರೆ. ರಾಜ್ಯದಲ್ಲಿ ಈ ವರ್ಷ ಬಿಟ್‌ಕಾಯಿನ್ ಹಗರಣ ಇಷ್ಟು ಸದ್ದು ಮಾಡದೆ ಇದ್ದಿದ್ದರೆ, ಈ ಗೂಢಲಿಪಿ ಕರೆನ್ಸಿಯ ಸುತ್ತ ಇಷ್ಟೊಂದು ಬೆಳವಣಿಗೆಗಳು ಆಗುತ್ತಿರಲಿಲ್ಲವೇನೋ.

# ಕನ್ನಡ ವಿ.ವಿ. ಮೈಯೆಲ್ಲ ರಾಡಿ

11

ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯನ್ನಾಗಿಸುವ ಉದ್ದೇಶದ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿನ ಭ್ರಷ್ಟಾಚಾರ ಪ್ರಕರಣಗಳು ಸಾಲು ಸಾಲು ವರದಿಯಾಗಿದ್ದು ಪ್ರಕರಣಗಳ ಕಾರಣ ನಾಡು ನುಡಿಯ ಬಗ್ಗೆ ಕಾಳಜಿಯುಳ್ಳವರನ್ನು ಆತಂಕಕ್ಕೀಡು ಮಾಡಿದ ಸಂಗತಿ. ರಾಜ್ಯದ ಇತರ ವಿಶ್ವವಿದ್ಯಾಲಯಗಳಿಗೆ ಇಲ್ಲದ ವಿಶೇಷ ಸ್ಥಾನ ಕನ್ನಡ ವಿ.ವಿ.ಗೆ ಸಂಬಂಧಿಸಿದಂತೆ ಜನರ ಮನಸ್ಸಿನಲ್ಲಿದೆ. ಆ ಅಭಿಮಾನಕ್ಕೆ ಧಕ್ಕೆಯುಂಟಾಗುವಂತೆ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಹಗರಣಗಳು ಸಾಲು ಸಾಲಾಗಿ ಹೊರಗೆ ಬರುತ್ತಿರುವುದು ಶಿಕ್ಷಣ ಕ್ಷೇತ್ರದಲ್ಲಿ ನೈತಿಕಪ್ರಜ್ಞೆ ಕುಸಿತದ ಪ್ರಮಾಣವನ್ನು ಸೂಚಿಸುವಂತಿದೆ.

ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಜೊತೆಗೆ ವಿದ್ಯಾರ್ಥಿಗಳೂ ಆಡಳಿತ ಮಂಡಳಿಯ ಲಂಚಗುಳಿತನದ ಬಗ್ಗೆ ಮಾತನಾಡಿದ್ದಾರೆ. ನಿವೃತ್ತ ಕುಲಪತಿ ಹಾಗೂ ಪ್ರಾಧ್ಯಾಪಕರು, ತಮ್ಮ ಒಪ್ಪಿಗೆಯಿಲ್ಲದೆ ಪಿಂಚಣಿಯಿಂದ ಹಣ ಕಡಿತ ಮಾಡುತ್ತಿರುವುದನ್ನು ಆಕ್ಷೇಪಿಸಿ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. ಫೆಲೋಶಿಪ್ ಬಾಕಿ ಉಳಿಸಿಕೊಂಡಿರುವ ಬಗ್ಗೆ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಾರೆ. ಸಹಾಯಧನ ನೀಡದಿರುವ ಮೂಲಕ ದಲಿತ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದಿಂದ ವಂಚಿಸಲಾಗುತ್ತಿದೆ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ಮೀಸಲಾತಿ ನಿಯಮಗಳನ್ನು ಗಾಳಿಗೆ ತೂರಿ ಬೋಧಕ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸುತ್ತಿರುವ ಆರೋಪವನ್ನೂ ವಿ.ವಿ. ಎದುರಿಸುತ್ತಿದೆ. ಕರ್ನಾಟಕದ ವಿಶ್ವವಿದ್ಯಾಲಯವೊಂದು ಮೈಯೆಲ್ಲ ಕೊಳಕು ಮೆತ್ತಿಕೊಂಡು ಹೀಗೆ ಬಯಲಿನಲ್ಲಿ ನಿಂತಿದ್ದು ಇದೇ ಮೊದಲಿರಬೇಕು.